## ಕವಿಸಮಯ



## ಸಿದ್ಧಲಿಂಗ ಪಟ್ಟಣಶೆಟ್ಟಿ


ಕಲೆ: ರೂಪಶ್ರೀ ಕಲ್ಲಿಗನೂರು

# ಆಮಂತ್ರಣ

ಸುರಿಯುತಿರುವ ಮಳೆ, ಭೋರ್ಗರೆವ ಅಬ್ಬರದ ಹೊಳೆ.
ದುಗುಡ ಮೈವೆತ್ತಿರುವ ವ್ಯಾಕುಲತೆ ಮೆತ್ತಿರುವ
ಕರುಣ ಮುಖ ಅಸ್ಪಷ್ಟ ಹಾಸ ಮಿಡಿವಧರ ಆಭಾಸ
ಅಸ್ತವ್ಯಸ್ತ ವ್ಯಕ್ತಿ ಆಚೆ ದಡ, ಇಳಿಹೊತ್ತು, ಎತ್ತಿದ ಕೈ
ಕರೆದುಕೋ ನಿನ್ನ ಕಡೆ ಕೋರುತಿಹುದೇ
ಮಾಡುತಿದೆಯೇ ಸನ್ನೆ ಬಾ ನನ್ನ ಕಡೆಗಿಲ್ಲಿ
ಕರೆವ ಕೈ ಮೊರೆವ ಕೈ ಅಂತರದ ಆಂತರ್ಯ
ಅರಿಯದಾಗಿದೆ ಇಲ್ಲಿ ಮಬ್ಬುಗಾವಳದಲ್ಲಿ
ಬಾ ಎನುವ ಕರೆಯೋ ತಾ ಬರುವ ಮೊರೆಯೋ
ನಿಲುಕದಿದೆ ಅರಿವಿಗೆ ಇದು ದಿಗಿಲು ಹೊರೆ
ಪರಿಹರಿಸು ಅಂತರ ದೊರೆ

ತ್ರಸ್ತ ಜೀವಕ್ಕೆ ಪ್ರಾಣಸಖ ಯಾರು? ಎಂಥ ಕರೆಯಿದು
ಹೊಳೆ ದಾಟಬೇಕೇ ಈ ಹೊತ್ತು ತಲೆ ಮೇಲೆ ಆಪತ್ತು
ತಲುಪಬೇಕಿದೆ ಯಾರು ಆ ತಟ ಇಲ್ಲ ಈ ತಟ
ಈಸು ಬಲ್ಲವರಿಲ್ಲ ಒಳಸುಳಿವು ಹರಿವು ಅರಿತವರಿಲ್ಲ
ಇಲ್ಲ ನಾವಿಕರು ನೆರವಿಗೆ ಬಂಧು ಸಂಬಂಧಿಗಳು
ಎರಡೂ ದಡದಿ ನಿಸ್ಸಹಾಯಕರು
ಕರೆ ಮೊರೆವ ಕೈಗೆ ಏನುತ್ತರ, ವ್ಯಗ್ರ ಮನ ತತ್ತರ

ನೀರಿನೆಳೆತದ ಸದ್ದು ಹೆಚ್ಚುತ್ತಿದೆ
ಶರಣು ನಿಃಶಬ್ದಕ್ಕೆ ಮಹಾಮೌನಕ್ಕೆ
ದೊರಕಿದರೆ ವಿಹಿತದ ದಾರಿ ಉಚಿತ ಉತ್ತರ ಖಚಿತ
ಅನತಿ ಸಮಯದಲಿ ಕವಿವ ಕತ್ತಲೆ ಕ್ರೂರ
ನಾಳೆ ತಿಳಿದವರಿಲ್ಲ ಕಾಲ ಕಂಡವರಿಲ್ಲ
ಎಲ್ಲ ಅಯೋಮಯ ಹಾಹಾಕಾರ ಕತ್ತಲುಸುರು
ಕಾಣದಾದುವು ಕೈ ಸನ್ನೆ ಆಕಾರ ಮುಖ ವಿವರ
ಬರಿಯೆ ಭೋರ್ಗರೆವ ಸದ್ದು ಕತ್ತಲೆಯೆ ಕೊನೆ ಮದ್ದು



# ಪ್ರತಿಮೆ

ಯಾವುದೋ ಕಾಲದಲಿ ಆಡಿದ್ದ
ಮಕ್ಕಳಿಗೆ ಕಲಿಸಿದ್ದ ತಿಳಿಸಿದ್ದ
ಪದ ಅರ್ಥ ಭಾವ ಹಲಕೆಲ ಮೂಲ
ಅರಿವಿಗೆ ನಿಲುಕತೊಡಗಿವೆ ಈಗ
ಅರ್ಥ ತನು ತೋರುತಿವೆ ತೆರೆದು
ಹನುಮನೆದೆಯಲಿ ಕಂಡ ರಾಮಪ್ರತಿಮೆ.
ಒಂದೊಂದೆ, ಅಷ್ಟಷ್ಟೆ. ಕಾಲ ಕಳೆದಂತೆ.
ಹಿಡಿದು ಅಪ್ಪನ ಧೋತರ ಚುಂಗು
ಲುಟುಪುಟು ನಡೆದಂತೆ ಪುಟುಪುಟು
ಮಗು ಮೊಗದಿ ತುಂಬಿ ಸಂತಸ ಹೆಮ್ಮೆ
ನಡೆಯುತಿರುವೆ.